**ಸಾಕ್ಷಿಯನ್ನು ದಿಃ 29.01.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲುಃ ಫಿರ್ಯಾದುದಾರರ ಪರ ಶ್ರೀ ಎಂ ಎ ಎಂ ವಕೀಲರಿಂದ**

ನಾನು ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕ. ಈಗ ನಾನು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಚಂದನಗಿರಿ, ಹನಗೋಡು ಹೋಬಳಿ, ಹುಣಸೂರು ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಸರ್ಕಾರಿ ಪ್ರಾಥಮಿಕ ಶಾಲೆ ಸರಸ್ವತಿಪುರಂ ನಲ್ಲಿ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ. ನಿಪಿ 1 ನನ್ನ ಖಾತೆಗೆ ಸಂಬಂಧಿಸಿದ ಚೆಕ್ ಎಂದರೆ ಸರಿ. ನಿಪಿ 1(ಎ) ಸಹಿ ನನ್ನದು. ಫಿರ್ಯಾದುದಾರರು ನನಗೆ ಪರಿಚಿತರು ಎಂದರೆ ಇಲ್ಲ. ನಾನು ಫಿರ್ಯಾದುದಾರರಿಂದ ರೂ 4 ಲಕ್ಷ ಸಾಲ ಪಡೆದುಕೊಂಡಿದ್ದೇನೆ ಎಂದರೆ ಇಲ್ಲ. ದಿನಾಂಕ 26.09.2019 ರಂದು ಫಿರ್ಯಾದುದಾರರು ನನಗೆ ಒಂದು ನೋಟೀಸ್ ನ್ನು ನೋಂದಾಯಿತ ಅಂಚೆಯಲ್ಲಿ ಕಳುಹಿಸಿದ್ದರು ಎಂದರೆ ಇಲ್ಲ. ಆ ಸಮಯದಲ್ಲಿ ನಾನು ಬೇರೆ ಶಾಲೆಯಲ್ಲಿ ನಿಯೋಜನೆ ಮೇರೆಗೆ ಕನ್ನಡ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಿಪಿ 5 ರಲ್ಲಿರುವ ವಿಳಾಸ ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಶಾಲೆಯ ವಿಳಾಸ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ನೋಟೀಸು ಬರುವ ಕಾಲಕ್ಕೆ ನಾನು ನಿಯೋಜನೆ ಮೇರೆಗೆ ಬೇರೆ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ನುಡಿಯುತ್ತಾರೆ.

9901379694 ನನ್ನ ಮೊಬೈಲ್ ಸಂಖ್ಯೆಯಾಗಿದೆ. ಸಾಮಾನ್ಯವಾಗಿ ಅಂಚೆ ಕಚೇರಿಯಿಂದ ಯಾವುದಾದರು ಪತ್ರ ವ್ಯವಹಾರ ಇದ್ದಲ್ಲಿ ಮೊಬೈಲ್ ಫೋನ್ ಮೂಲಕ ತಿಳಿಸುತ್ತಾರೆ ಎಂದರೆ ಸರಿ. ಅಂಚೆ ಇಲಾಖೆಯವರು ಯಾವುದಾದರು ಪತ್ರ ಜಾರಿಯಾಗಿದೆಯೇ ಇಲ್ಲವೇ ಎಂಬ ಬಗ್ಗೆ ಕೆಲವು ಮಾಹಿತಿಗಳನ್ನು ನಮೂದಿಸುತ್ತಾರೆ ಎಂದರೆ ಸರಿ. ಆ ಬಗ್ಗೆ ಇನಫಾರ್ಮೆಷನ ನೀಡಿರುತ್ತಾರೆ ಎಂದರೆ ಸರಿ. ನಿಪಿ 5 ರಲ್ಲಿ unclaimed ಎಂಬ ಕಾರಣಕ್ಕಾಗಿ ಹಿಂದಿರುಗಿಸಲಾಗಿದೆ ಎಂದು ಬರೆಯಲಾಗಿದೆ ಎಂದರೆ ಅದನ್ನು ಸೃಷ್ಠಿ ಮಾಡಿದ್ದಾರೆ. ನಾನು ಉದ್ದೇಶಪೂರ್ವಕವಾಗಿ ನೋಟೀಸ್ ನ್ನು ಸ್ವೀಕರಿಸದೆ ಇರುವ ಕಾರಣವೆ ಅದು unclaimed ಎಂದು ವಾಪಸ್ಸಾಗಿದೆ ಎಂದರೆ ಸರಿಯಲ್ಲ. ನನಗೆ ಸಾಮಾನ್ಯ ಅಂಚೆಯಲ್ಲಿಯೂ ಕೂಡ

ನೋಟೀಸು ಬಂದಿತ್ತು ಎಂದರೆ ಆ ಸಮಯದಲ್ಲಿ ನಾನು ಆ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ನಾನು ಫಿರ್ಯಾದುದಾರರಿಗೆ ರೂ 4 ಲಕ್ಷ ಹಣ ಕೊಡಬೇಕಾಗಿದೆ ಎಂದರೆ ಸರಿಯಲ್ಲ. ನಾನು ಆ ಹಣವನ್ನು ಮರುಪಾವತಿಸದೆ ಫಿರ್ಯಾದುದಾರರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಣ ಪಡೆದಿಲ್ಲ. ಫಿರ್ಯಾದುದಾರರ ಬಳಿ ರೂ 4 ಲಕ್ಷ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇತ್ತು ಎಂದರೆ ಸರಿಯಲ್ಲ. ನಾನು ಓಲೆ ರವಿರವರ ಬಳಿ ಭದ್ರತೆಗಾಗಿ ಎರಡು ಚೆಕ್ ಗಳನ್ನು ನೀಡಿದ್ದೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಓಲೆ ರವಿರವರಿಗೆ ಚೆಕ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರೊಂದಿಗೆ ವ್ಯವಹಾರ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.